ಮಿಸ್‌ಕೇಸ್ . - 16/2022
ಪಿ.ಡಬ್ಲ್ಯು. - 01

**ದಿನಾಂಕ 05-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ಎದುರುದಾರರ ಪರ ವಕೀಲರಿಂದಃ**

ದಾವೆಯಲ್ಲಿ ಮತ್ತು ಈ ಅರ್ಜಿಯಲ್ಲಿ ಕಾಣಿಸಿರುವ ವಿಳಾಸ, ಹೆಸರು ಸರಿ ಇರುತ್ತದೆ. ಯಾವುದೇ ನೋಟಿಸನ್ನು ಕಳುಹಿಸಿದರೇ ಸದರಿ ವಿಳಾಸಕ್ಕೆ ಬಂದು ತಲುಪುತ್ತದೆ ಎಂದರೆ ಸರಿ . ದಾವೆಗೆ ವಕೀಲರಿಗೆ ನಾವೇ ಮಾಹಿತಿ ಕೊಟ್ಟಿರುತ್ತೇವೆ . ನಮ್ಮ ವಕೀಲರ ವಿರುದ್ದ ಯಾವುದೇ ಆಪಾದನೆ ಇಲ್ಲ . ನಮ್ಮವಕೀಲರು ವ್ಯಾಜ್ಯದಲ್ಲಿ ನಮಗೆ ಮೋಸ ಮಾಡಿಲ್ಲ. ನಮ್ಮ ವಕೀಲರು ನಮ್ಮ ಕೇಸನ್ನು ಸರಿಯಾಗಿ ನಡೆಸಿರುತ್ತಾರೆ. ಕಾಲಕಾಲಕ್ಕೆ ನಾವು ವಕೀರಿಗೆ ಮಾಹಿತಿಯನ್ನು ಕೊಡುತಿದ್ದೆವು. ಕಾಲಕಾಲಕ್ಕೆ ವಕೀಲರಿಂದ ನಾವು ದಾವೆ ಬಗ್ಗೆ ಮಾಹಿತಿಯನ್ನು ಪಡೆಯುತಿದ್ದೆವು . ಈ ಅರ್ಜಿಯನ್ನು ಹಾಕುವ ಹಿಂದಿನ ಒಂದು ವರ್ಷದ ವರೆಗೆ ನಮ್ಮದಾವೆ ಸಲ್ಲಿಸಿದ್ದ ವಕೀಲರ ಜೊತೆ ನಾವು ಮಾತನಾಡುತಿದ್ದೆವು. ನಾವೇ ಖಾಯಂ ಆಗಿ ವಕೀಲರ ಕಚೇರಿಗೆ ಹೋಗುತಿದ್ದೆವು ಅವರು ಮಾಹಿತಿ ಕೊಡುತಿದ್ದರು. ಹಳೆಯ ವಕೀಲರನ್ನು ದಾವೆಯನ್ನು ಪುನಃ ಪುನರಜ್ಜೀವನ ಮಾಡಿ ಅರ್ಜಿ ಹಾಕಿ ಎಂದು ನಾವು ಕೇಳಲಿಲ್ಲ . ನಮ್ಮ ಗೈರಿನಲ್ಲಿ ನಮ್ಮ ಹಳೆಯ ವಕೀಲರು ನಮ್ಮ ವಿಚಾರಣೆಗೆ ನ್ಯಾಯಾಲಯದಿಂದ ಸಾಕಷ್ಟು ಸಮಯವಕಾಶವನ್ನು ಪಡೆದಿದ್ದರು. ಕೊನೆಯ ಬಾರಿಗೆ ನಾವು ವಿಚಾರಣೆಗೆ ಹಾಜರಾಗದೇ ಅದು ವಜಾಗೊಂಡಿತು ಎಂದರೆ ಸರಿ . ವಿಚಾರಣೆಗೆ ಹಾಜರಾಗುವಂತೆ ನಮ್ಮ ಹಳೆಯ ವಕೀಲರು ನಮಗೆ ನೋಟಿಸು ಕೊಟ್ಟಿದ್ದರು ಎಂದರೆ ಸರಿ. ಸದ್ರಿ ನೋಟಿಸು ನಮಗೆ ತಲುಪಿದೆ ಎಂದರೆ ಸರಿ . ನಾವು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದರಿಂದ ನಮ್ಮ ತಪ್ಪಿನಿಂದ ಕೇಸು ವಜಾ ಆಯಿತು ಎಂದರೆ ಸರಿ . ಕರಾರಿಗೆ ಸಂಬಂಧಪಟ್ಟಂತೆ deficit stamp fee ಇದ್ದುದರಿಂದ ನಾವು ಕಟ್ಟಲು ಹಣಇರಲಿಲ್ಲ ಆದ್ದರಿಂದ ನ್ಯಾಯಾಲಯಕ್ಕೆ ಬರಲಿಲ್ಲ. ಅದು ದಂಡ ಸೇರಿ ದೊಡ್ಡ ಮೊತ್ತ ಇದ್ದುದರಿಂದ ಅದನ್ನು ನಾವು ಕಟ್ಟಲು ಆಗಲಿಲ್ಲ. ನಾವು ಹಣವನ್ನು ಹೊಂದಿಸಲು ನಮಗೆ ತುಂಬಾ ಸಮಯ ಬೇಕಾಗಿತ್ತು ಆದ್ದರಿಂದ ನಮ್ಮ ವಕೀಲರನ್ನು ಭೇಟಿ ಆಗಲು ಬಂದಿಲ್ಲ. ನೋಟಿಸು ಬಂದ ನಂತರ ಹಣ ಒಟ್ಟು ಮಾಡಬೇಕಾಗಿದ್ದರಿಂದ ಅದನ್ನು ಸೇರಿಸಿಕೊಂಡು ಬರುತ್ತೇನೆ ಎಂದು ಅಲ್ಲಿಯವರೆಗೆ ನಮ್ಮ ವಕೀಲರಿಗೆ ಹೇಳುತಿದ್ದೆ. 2017-18 ರವರೆಗೆ ನಾನು ಹಣ ಹೊಂದಿಸಲು ಪ್ರಯತ್ನ ಪಡುತಿದ್ದೆ. 2016 ರಿಂದ 2018 ರವರೆಗೆ

ಹಣ ಒಟ್ಟು ಮಾಡುತಿದ್ದ ವಿಚಾರವನ್ನು ಆಗಾಗ್ಗೆ ನಮ್ಮ ವಕೀಲರಿಗೆ ತಿಳಿಸುತಿದ್ದೆ . ದಾವೆ ವಜಾಗೊಂಡ 1.5 ತಿಂಗಳ ಒಳಗಾಗಿ ನಮಗೆ ನಮ್ಮ ವಕೀಲರು ತಿಳಿಸಿರುತ್ತಾರೆ . 2017 ಜನವರಿ - ಫೆಬ್ರುವರಿಯಲ್ಲಿ ದಾವೆ ವಜಾಗೊಂಡ ಬಗ್ಗೆ ನಮಗೆ ತಿಳಿಸಿರುತ್ತಾರೆ . ಇನ್ನೊಬ್ಬ ವಾದಿಯವರು ನಮ್ಮ ವಕೀಲರಿಗೆ ಫೋನ್ ಮಾಡಿದಾಗ ವಕೀಲರು ದಾವೆ ವಜಾಗೊಂಡಿರುವ ಬಗ್ಗೆ ತಿಳಿಸಿರುತ್ತಾರೆ. 1ನೇ ವಾದಿ ಮಯ್ಯದಿ ರವರು ದಾವಾ ವಜಾಗೊಂಡಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ . 2017 ಫೆಬ್ರುವರಿ ರಲ್ಲಿ 1ನೇ ವಾದಿ ನಮಗೆ ದಾವೆ ವಜಾಗೊಂಡಿರುವ ಬಗ್ಗೆ ತಿಳಿಸಿರುತ್ತಾರೆ. ಆ ರೀತಿ ವಜಾಗೊಂಡಿರುವ ವಿಚಾರ ತಿಳಿದ ಕೂಡಲೇ ನಾನು ವಕೀಲರನ್ನು ಸಂಪರ್ಕ ಮಾಡಿ ಹಣ ಒಟ್ಟು ಮಾಡಲು ಸಮಯ ಬೇಕು ಬರುತ್ತೇನೆ ಎಂದು ತಿಳಿಸಿರುತ್ತೇನೆ. ಆಗ ನಮ್ಮ ವಕೀಲರು ಹಣ ಒಟ್ಟು ಮಾಡಿಕೊಂಡು ಬನ್ನಿ ನಂತರ ನಾನು ಕೇಸನ್ನು ಮುಂದುವರಿಸುವುದಾಗಿ ತಿಳಿಸಿರುತ್ತಾರೆ . ಹಣ ಇಲ್ಲಿಯವರೆಗೆ ಹೊಂದಿಸಲು ಸಾದ್ಯವಾಗಿಲ್ಲ. ಆದ್ದರಿಂದ ನಾನು ಪುನಃ ನಮ್ಮ ವಕೀಲರ ಬಳಿ ಹೋಗಲಿಲ್ಲ . ದಾವೆ ವಜಾಗೊಂಡ ನಂತರ 2017 ಫೆಬ್ರುವರಿ- ಮಾರ್ಚ್ ನಲ್ಲಿ ವಜಾಗೊಂಡ ಆದೇಶ ಪುಟವನ್ನು ತೆಗೆದುಕೊಡಿ ಎಂದು ನಾನು ಹೇಳಲಿಲ್ಲ 1ನೇ ವಾದಿ ಹೇಳಿರಬಹುದು . ಕಾಪಿ ಸಿಕ್ಕಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 1ನೇವಾದಿಗೆ ಗೊತ್ತಿರುತ್ತದೆ . ನಾನು ಕಾಪಿಯನ್ನು ಪಡೆದುಕೊಂಡಿಲ್ಲ. 1ನೇ ವಾದಿಯವರು ಕಾಪಿಯನ್ನು ಯಾವಾಗ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನಾನು ಕೇಸು ನಡೆಸಲು ಬರದಿದ್ದರೇ ವಜಾ ಆಗುತ್ತದೆ ಎಂದು ನಮ್ಮ ವಕೀಲರು ನೋಟಿಸಿನಲ್ಲಿ ತಿಳಿಸಿದ್ದರು ಎಂದರೆ ಸರಿ .

ನನ್ನ ಆರೋಗ್ಯ ಚೆನ್ನಾಗಿರಲಿಲ್ಲ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. 1ನೇ ವಾದಿಯವರ ಆರೋಗ್ಯ ಚೆನ್ನಾಗಿತ್ತು . 11-11-2016 ರ ನಂತರ ನಾನು ಎರಡು ಮೂರು ಬಾರಿ ನಮ್ಮ ಹಳೆಯ ವಕೀಲರನ್ನು ಭೇಟಿ ಆಗಿದ್ದೆ. ಹೊಸ ವಕೀಲರನ್ನು 1ನೇ ವಾದಿ ನೇಮಕ ಮಾಡಿರುತ್ತಾರೆ ಕಾರಣ ಏನು ಎಂದು ಗೊತ್ತಿಲ್ಲ. ಹೊಸ ವಕೀಲರನ್ನು ನೇಮಕ ಮಾಡುವಾಗ ಹಳೆ ವಕೀಲರ ಗಮನಕ್ಕೆ 1ನೇ ವಾದಿ ತಂದಿದ್ದಾರೋ ಇಲ್ಲವೋ ಎಂದು ಗೊತ್ತಿಲ್ಲ . ನನ್ನ ಮುಖ್ಯವಿಚಾರಣೆಯ ಪ್ಯಾರಾ 9 ರಲ್ಲಿ ಹೇಳಿರುವಂತೆ ಪ್ರತಿವಾದಿಯನ್ನು ಕೇಸು ಹಾಕಿದ ನಂತರ ಮತ್ತು ಕೇಸು ವಜಾಗೊಂಡ ನಂತರ ಭೇಟಿ ಆಗಿದ್ದೇನೆ . ನಾನು ಎಂದು ಮತ್ತು ಯಾವಾಗ ಭೇಟಿಯಾಗಿದ್ದೆ ಎಂದು ಹೇಳಲು ಸಾದ್ಯವಿಲ್ಲ . ನಾನು ನನ್ನ ಮುಖ್ಯವಿಚಾರಣೆಯ

ಪ್ಯಾರಾ 9 ರಲ್ಲಿ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆದೇಶ ಪುಟವನ್ನು ಪಡೆದನಂತರ ಕೂಡ ಈ ಅರ್ಜಿ ಸಲ್ಲಿಸಲು 177 ದಿನ ವಿಳಂಭವಾಗಿದ್ದು ಕಾರಣ ಹಣ ಹೊಂದಿಸಲು ಕಷ್ಟವಾಗಿತ್ತು . ನಾನು ಉದ್ದೇಶಪೂರ್ವಕವಾಗಿ ಸಕಾಲದಲ್ಲಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿ ಪುರಸ್ಕರಿಸಲು ಯಾವುದೇ ಸಕಾರಣ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಅರ್ಜಿ ನಿಲ್ಲತಕ್ಕದಲ್ಲ ಎಂದರೆ ಸರಿಯಲ್ಲ . ನನ್ನ ಅರ್ಜಿ ಮತ್ತು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ .

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.